**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,  ಚನ್ನಗಿರಿ**

**ಸಿಸಿ ನಂ.3204/2025**

ಹೆಸರುಃ  ಹನಮಂತಪ್ಪ                                    ಚಾಸಾಃ 3

ತಂದೆಯ  ಹೆಸರುಃ ಹನುಮಂತಪ್ಪ                                ಪ್ರಾಸಾ:2

ವಯಸ್ಸುಃ  40  ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ  ಗರಗ ಗ್ರಾಮ,   ಚನ್ನಗಿರಿ  ತಾಃ

ಸಾಕ್ಷಿಗೆ ದಿನಾಂಕಃ08-06-2026 ರಂದು ಪ್ರಮಾಣ ವಚನ ಭೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಕೆಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ   ಸಾಕ್ಷಿ ಅದರಲ್ಲಿರುವ  ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ,  ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ)  ಎಂದು ಗುರುತಿಸಲಾಯಿತು.

ನಿಪಿ-1 ಕ್ಕೆ ಪೊಲೀಸ್ ಠಾಣೆಯಲ್ಲಿ ಯಾವಾಗ ಮತ್ತು ಯಾವ ವಿಚಾರವಾಗಿ ಸಹಿ ಮಾಡಿರುತ್ತೇನೆ  ಎಂದು ನನಗೆ ಗೊತ್ತಿಲ್ಲ. ನಿಪಿ-1   ರ ಕಾಲಕ್ಕೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-1ಕ್ಕೆ    ಪ್ರತಿಕೂಲ ಸಾಕ್ಷ್ಯ  ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,    ನಿಪಿ-1   ನ್ನು  ನೋಡಲಾಗಿ ಸಾಕ್ಷಿಯು  ನಿಪಿ-1  ಕ್ಕೆ  ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟೀ ಸವಾಲು - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿಃ 22-03-2025 ರಂದು ಚಾಸಾ-1 ರವರು    ನನ್ನ ಹಾಗೂ ಚಾಸಾ-2 ರವರ ಸಂಜೆ 6.00 ರಿಂದ 7.00 ರವರೆಗೆ ನಿಪಿ-1 ರಂತೆ  ಪಂಚನಾಮೆ ಜರುಗಿಸಿ ನಮ್ಮಗಳ ಸಮಕ್ಷಮ

90 ಎಂಎಲ್ ನ 73 ರಾಜಾ ವಿಸ್ಕಿ ಪೌಚ್ ಗಳು ಮತ್ತು 90 ಎಂ ಎಲ್ ನ 15 ಹೈ ವರ್ಡ ವಿಸ್ಕಿ ಪೌಚ್ ಗಳನುನ ಅಮಾನತುಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣದ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚನ್ನಗಿರಿ**

## ಸಿಸಿ ನಂ.3204/2025

ಹೆಸರುಃ ತಿಮ್ಮಪ್ಪ ಚಾಸಾಃ 2

ತಂದೆಯ ಹೆಸರುಃ ಮೂರ್ತಪ್ಪ ಪ್ರಾಸಾ:1

ವಯಸ್ಸುಃ 54 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಗರಗ ಗ್ರಾಮ, ಚನ್ನಗಿರಿ ತಾಃ

ಸಾಕ್ಷಿಗೆ ದಿನಾಂಕಃ08-06-2026 ರಂದು ಪ್ರಮಾಣ ವಚನ ಭೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಕೆಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ಸ್ಥಳ ಮತ್ತು ಅಮಾನತು ಮಹಜರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-1 ಎಂದು, ಅದರಲ್ಲಿರೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ನಿಪಿ-1 ಕ್ಕೆ ಪೊಲೀಸ್ ಠಾಣೆಯಲ್ಲಿ ಯಾವಾಗ ಮತ್ತು ಯಾವ ವಿಚಾರವಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಕಾಲಕ್ಕೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-1ಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-1 ನ್ನು ನೋಡಲಾಗಿ ಸಾಕ್ಷಿಯು ನಿಪಿ-1 ಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿಃ 22-03-2025 ರಂದು ಚಾಸಾ-1 ರವರು ನನ್ನ ಹಾಗೂ ಚಾಸಾ-3 ರವರ ಸಸಂಜೆ 6.00 ರಿಂದ 7.00 ರವರೆಗೆ ನಿಪಿ-1 ರಂತೆ ಪಂಚನಾಮೆ ಜರುಗಿಸಿ ನಮ್ಮಗಳ ಸಮಕ್ಷಮ

90 ಎಂಎಲ್ ನ 73 ರಾಜಾ ವಿಸ್ಕಿ ಪೌಚ್ ಗಳು ಮತ್ತು 90 ಎಂ ಎಲ್ ನ 15 ಹೈ ವರ್ಡ ವಿಸ್ಕಿ ಪೌಚ್ ಗಳನುನ ಅಮಾನತುಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣದ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 3543/2019**

ಹೆಸರು : ವಿ ಕೆ ಸುಬ್ರಮಣಿ

ತಂದೆಯ ಹೆಸರುಃ ಆರ್ ಕೃಷ್ಣಪ್ಪ

ವಯಸ್ಸುಃ 51 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ವೆಂಕಟಗಿರಿ ಕೋಟೆ

**PW-1, CW-1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೇಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ಈ ಸಂಬಂದವಾಗಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ಎಲ್ಲಿ ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ2 ರ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 15-05-2019 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಚಿಕ್ಕಬಳ್ಳಾಪುರ ದೇವನಹಳ್ಳಿ ಎನ್ ಹೆಚ್ 7 ರಸ್ತೆ ಹೊಸಹುಡ್ಯ ಗೇಟ್ ಬಳಿ ಆರೋಪಿಯು ಕೆಎ-01-ಎಜೆ 9492 ಟಾಟಾ ಎಸ್ ಚಾಲಕ ದೇವನಹಳ್ಳಿ ಕಡೆಯಿಂದ ಚಿಕ್ಕಬಳ್ಳಾಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆ ಚಾಲನೆ ಮಾಡಿ ರಸ್ತೇ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದ ಮುನಿರಾಜು ಡಿಕ್ಕಿ ಪಡಿಸಿ ತೀವ್ರ ಸ್ವರೂಪದ ಗಾಯಪಡಿಸಿ ದೇವನಹಳ್ಳಿ ಮಾನಸ ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆ ಕೊಡಿಸಿದರೂ ಸಹ ಗುಣಮುಖವಾಗದೇ ದಿ 16-05-2019 ರಂದು ಬೆಳಗಿನ ಜಾವ 2.00 ಗಂಟೆ ಸಮಯದಲ್ಲಿ ಮೃಪಟ್ಟಿರುವ ವಿಚಾರವಾಗಿ ದಿ. 16-05-2019 ರಂದು ನಿಪಿ-1ರಂತೆ ಪೋಲಿಸರಿಗೆ ದೂರು ನೀಡಿದೆ ಎಂದರೆ ಸರಿಯಲ್ಲ. ನಿಪಿ 1 ನ್ನು ದೂರನ್ನು ನಾನೇ

ಬರೆದುಕೊಟ್ಟಿದ್ದೇ ಎಂದರೆ ಸರಿಯಲ್ಲ.  ಈ ದೂರಿನಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ.

3. ದಿನಾಂಕ 16-05-2019 ರಂದು ಕೃತ್ಯ ನಡೆದ ಸ್ಥಳದಲ್ಲಿ ಪೋಲೀಸರು ನನ್ನ ಹಾಗೂ ಚಾಸಾ 03 ಮತ್ತು 4 ರವರ ಸಮಕ್ಷಯ ನಿಪಿ 2 ರಂತೆ ಸ್ಥಳ ಮಹಜರುನ್ನು ಮಧ್ಯಾಹ್ನ 2.00 ರಿಂದ 3.00 ಗಂಟೆಯ ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರ ಕಾಲಕ್ಕೆ ಅಪಘಾತ ಪಡಿಸಿದ ವಾಹನವನ್ನು, ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ.  ಆ ಕಾಲಕ್ಕೆ ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ  ಶ್ರೀ ಸಿ ಕೆ ಜಿ  ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**ಸಿ.ಸಿ ನಂ. 3543/2018**

ಹೆಸರು : ಶ್ರೀಮತಿ.ಸುಬ್ಬಮ್ಮ@ ಲಕ್ಷ್ಮೀ

ತಂದೆಯ ಹೆಸರುಃ ಶ್ರೀನಿವಾಸ

ವಯಸ್ಸುಃ 43 ವರ್ಷ

ಉದ್ಯೋಗಃ ಗೃಹಣಿ

ವಾಸಃ ಮುಕ್ಯಾಲನಗರ, ಬೆಂಗಳೂರು.

**PW-2, CW-6**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೇಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ.ಈ ಸಂಬಂದವಾಗಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಸಂಬಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 11-06-2018 ರಂದು ಆರೋಪಿತನು ಘಟನಾ ಸ್ಥಳದಲ್ಲಿ ಅತಿವೇಗ ಮತ್ತು ಆಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ಅಪಘಾತ ಪಡಿಸಿರುವುದನ್ನು ನಾನು ಕಣ್ಣಾರೆ

ನೋಡಿರುತ್ತೇನೆಂದರೆ ಸರಿಯಲ್ಲ. ಈ ಸಂಬಂದ ನಾನು ದಿ-25-06-2018 ರಂದು ಈ ಮೇಲಿನಂತೆ ಪೋಲಿಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ಸಂಪೂರ್ಣ ಭಾಗವನ್ನು ಓದಿ ಹೇಳಿದರು ಸಹ ನೀರಾಕರಿಸಿದ ಕಾರಣ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎ.ಆರ್ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 4743/2019**

ಹೆಸರು : ಆಂಜನಪ್ಪ

ತಂದೆಯ ಹೆಸರುಃ ಕೃಷ್ಣಪ್ಪ

ವಯಸ್ಸುಃ 48 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಮುದ್ದನಾಯಕನಹಳ್ಳಿ

**PW-3, CW-3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು ಅವರು ನಮ್ಮ ಗ್ರಾಮದವರು. ಈ ಪ್ರಕರಣದ ಸಂಬಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೇಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ.

2. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ಎಲ್ಲಿ ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ2 ರ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ

ದಿನಾಂಕ 30-06-2018 ರಂದು ಕೃತ್ಯ ನಡೆದ ಸ್ಥಳದಲ್ಲಿ ಪೋಲೀಸರು ನನ್ನ ಹಾಗೂ ಚಾಸಾ 1 ಮತ್ತು 4 ರವರ ಸಮಕ್ಷಯ ನಿಪಿ 2 ರಂತೆ ಸ್ಥಳ ಮಹಜರುನ್ನು ಬೆಳಿಗ್ಗೆ 11 ರಿಂದ 12 ಗಂಟೆ ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರ ಕಾಲಕ್ಕೆ ಅಪಘಾತ ಪಡಿಸಿದ ವಾಹನವನ್ನು, ಮಾಲು ಪಟ್ಟಿಯಲ್ಲಿ ನಮೂದಿಸಿದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿ ನನ್ನ ಸ್ವಂತ ಗ್ರಾಮದವರಾದ ಕಾರಣ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಎನ್.ಆರ್ ಆರೋಪಿ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 4743/2019**

ಹೆಸರು : ಗೋವಿಂದರಾಜು

ತಂದೆಯ ಹೆಸರುಃ ಮುನಿಯಪ್ಪ

ವಯಸ್ಸುಃ 52 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಬಿದಲೂರು

**PW-2, CW-2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು ಅವರು ನಮ್ಮ ಪಕ್ಕದ ಗ್ರಾಮದವರು. ಈ ಪ್ರಕರಣದ ಸಂಬಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೇಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ.ಈ ಸಂಬಂದವಾಗಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಸಂಬಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 29-06-2018 ರಂದು ನಾನು ರಾತ್ರಿ 10-30 ಗಂಟೆ ಸಮಯದಲ್ಲಿ ಆರೋಪಿತನು ಸಿಎಜಡ್-5208 ರ ಮೋಟಾರ ಸೈಕಲನ ಸವಾರನಾಗಿದ್ದು, ಸದರಿ ಮೋಟಾರ ಸೈಕಲೇಗೆ ಯಾವುದೇ ವಿವೆ ಮಾಡಿಸದೇ ಮೋಟಾ ಸೈಕಲನ್ನು ದೇವನಹಳ್ಳಿ ಯಿಂದ ದೊಡ್ಡ ಬಳ್ಳಾಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೇ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಪರಿಚಿತ ಗಂಡಸಿಗೆ ಡಿಕ್ಕಿ ಪಡಿಸಿ ತೀವ್ರ ಸ್ವರೂಪದ ಗಾಯಪಡಿಸಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲವೆಂದರೆ ಸರಿಯಲ್ಲ. ಈ ಸಂಬಂದ ನಾನು ದಿ-06-07-2018 ರಂದು ಈ ಮೇಲಿನಂತೆ ಫೋಲಿಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ಸಂಪೂರ್ಣ ಭಾಗವನ್ನು ಓದಿ ಹೇಳಿದರು ಸಹ ನೀರಾಕರಿಸಿದ ಕಾರಣ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿ ನಮ್ಮ ಪಕ್ಕದ ಗ್ರಾಮದವರಾದ ಕಾರಣ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಎನ್.ಆರ್ ಆರೋಪಿ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 4743/2019**

| | |
|---|---|
| ಹೆಸರು : | ನಾಗರಾಜ |
| ತಂದೆಯ ಹೆಸರುಃ | ವೀರಭದ್ರಯ್ಯ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ವ್ಯವಸಾಯ |

ವಾಸಃ ಮುದ್ದನಾಯಕನಹಳ್ಳಿ

**PW-1, CW-1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು ಅವರು ನಮ್ಮ ತಮ್ಮ. ಈ ಪ್ರಕರಣದ ಸಂಬಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೇಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ಈ ಸಂಬಂದವಾಗಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಸ್ದಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯು ಸ್ದಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ದಳ ಪಂಚನಾಮೆಯನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ಎಲ್ಲಿ ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ2 ರ ಕಾಲಕ್ಕೆ ನನ್ನ ಸವುಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 29-06-2018 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಆರೋಪಿತನು ಸಿಎಜಡ್-5208 ರ ಮೋಟಾರ ಸೈಕಲನ ಸವಾರನಾಗಿದ್ದು, ಸದರಿ ಮೋಟಾರ ಸೈಕಲೀಗೆ ಯಾವುದೇ ವಿವೆ ಮಾಡಿಸದೇ ಮೋಟಾ ಸೈಕಲನ್ನು ದೇವನಹಳ್ಳಿ ಯಿಂದ ದೊಡ್ಡ ಬಳ್ಳಾಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೇ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಪರಿಚಿತ ಗಂಡಸಿಗೆ ಡಿಕ್ಕಿ ಪಡಿಸಿ ತೀವ್ರ ಸ್ವರೂಪದ ಗಾಯಪಡಿಸಿ ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಗಾಯಾಳು ಮೃತಪಟ್ಟ ಬಗ್ಗೆ ದಿ. 30-06-2018 ರಂದು ನಿಪಿ-1 ಂ ತೆ ಪೋಲಿಸರಿಗೆ ದೂರು ನೀಡಿದೆ ಎಂದರೆ ಸರಿಯಲ್ಲ. ದೂರನ್ನು ನಾನೇ ಬೆರಳಚ್ಚು ಮಾಡಿಸಿ ನೀಡಿದೆ ಎಂದರೆ ಸರಿಯಲ್ಲ. ಈ ದೂರಿನಲ್ಲಿರುವ ಅಂಶಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ.

3. ದಿನಾಂಕ 30-06-2018 ರಂದು ಕೃತ್ಯ ನಡೆದ ಸ್ಥಳದಲ್ಲಿ ಪೋಲೀಸರು ನನ್ನ ಹಾಗೂ ಚಾಸಾ 03 ಮತ್ತು 4 ರವರ ಸಮಕ್ಷಯ ನಿಪಿ 2 ರಂತೆ ಸ್ಥಳ ಮಹಜರುನ್ನು ಬೆಳಿಗ್ಗೆ 11 ರಿಂದ 12 ಗಂಟೆ ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರ ಕಾಲಕ್ಕೆ ಅಪಘಾತ ಪಡಿಸಿದ ವಾಹನವನ್ನು, ಮಾಲು ಪಟ್ಟಿಯಲ್ಲಿ ನಮೂದಿಸಿದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿ ನನ್ನ ಸ್ವಂತ ತಮ್ಮನಾದ ಕಾರಣ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಎನ್.ಆರ್ ಆರೋಪಿ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 3444/2020**

ಹೆಸರು : ಪ್ರಮೋದ್ ಎನ್ ಐ

ತಂದೆಯ ಹೆಸರುಃ ಲೇಟ್ ರಾಜಣ್ಣ

ವಯಸ್ಸುಃ 34 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ನಾಗಮಂಗಲ

**PW-3, CW-3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-10-2023.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ನಾಗಮಂಗಲ ಗ್ರಾಮದ ರಾಮಣ್ಣರವರ ಮನೆಯ ಬಳಿ ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೇನೆ. ಒಂದು ಟ್ರಾಕ್ಟರ್ ಒಂದು ಅಪಘಾತದ ಸಂಬಂದವಾಗಿ ನಿಪಿ-2 ಕ್ಕೆ ಸಹಿ ಹಾಕಿರುತ್ತೇನೆ. ಸದರಿ ಸಮಯಕ್ಕೆ ಚಾಸಾ-2 ರವರು ಸಹಿ ಮಾಡಿರುತ್ತಾರೆ. ಇದನ್ನು ಹೊರತು ಪಡಿಸಿ ಬೇರೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ನಿಪಿ-2 ರ ಕಾಲಕ್ಕೆ ನನ್ನ ಸಮಕ್ಷಮ ಒಂದು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ವೈ ಎನ್ ಎಮ್ ಆರೋಪಿ ಪರ ವಕೀಲರಿಂದ**

ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ಪಂಚರಾಗುವಂತೆ ಪೋಲಿಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ-2 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿಕೊಂಡು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಟ್ರಾಕ್ಟರ್ ಅಪಘಾತ ಆದ ಬಗ್ಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್

ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 3444/2020**

ಹೆಸರು : ಆಂಜಿನಪ್ಪ

ತಂದೆಯ ಹೆಸರುಃ ಹುಚ್ಚಪ್ಪ

ವಯಸ್ಸುಃ 56 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ನಾಗಮಂಗಲ

**PW-2, CW-2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-10-2023.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನನಗೆ ಮೃತ ಶ್ರೀನಿವಾಸ್ ಗೊತ್ತಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಯಾವ ರೀತಿ ಸಂಬಂವಿಸಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ನ್ಯಾಯಾಲಯದ ಮುಂದಿರುವ 1 ನೇ ಅರೋಪಿ ಗೊತ್ತಿರುವುದಿಲ್ಲ, ನಾನು ಅವರನ್ನು ಈ ಮೊದಲು ನೋಡಿರುವುದಿಲ್ಲ. ಸಾಕ್ಷಿಯು ಅಪಘಾತ ನಡೆದ ಸ್ಥಳ ಪಂಚನಾಮೆಯನುನ ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ, ಸ್ಥಳ ಪಂಚನಾವೆಯನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ನಾಗಮಂಗಲ ಗ್ರಾಮದ ರಾಮಣ್ಣರವರ ಮನೆಯ ಬಳಿ ಹಾಕಿರುತ್ತೇನೆ. ಸದರಿ ಸಹಿಯನ್ನು ಒಂದು ಅಪಘಾತದ ಸಂಬಂದವಾಗಿ ಹಾಕಿರುತ್ತೇನೆ. ಸದರಿ ಸಮಯಕ್ಕೆ ಚಾಸಾ-3 ರವರು ಹಾಜರಿದ್ದರು. ಇದನ್ನು ಹೊರತು ಪಡಿಸಿ ಪೋಲಿಸರು ಬೇರೆ ಏನು ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 14-01-2020 ರಂದು ಮದ್ಯಾಹ್ನ 3.30 ಗಂಟೆಯ ಸಮಯದಲ್ಲಿ ನಾನು ಚೌಡನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ನಮ್ಮೂರಿನ ರಾಮಣ್ಣರವರ ಮನೆಯಿಂದ ಸ್ವಲ್ಪ ಮುಂದೆ ಹೋಗುತ್ತಿದ್ದಾಗ ಚೌಡನಹಳ್ಳಿ ಕಡೆಗೆ 1 ನೇ ಆರೋಪಿ ಕೆಎ-51-ಟಿ -6543 ರ ಟ್ರಾಕ್ಟರ್ ಮತ್ತು ಕೆಎ-51-ಟಿ -6544 ರಲ್ಲಿ ಜಲ್ಲಿ ಪುಡಿಯನ್ನು ತುಂಬಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಿಸುತ್ತಿದ್ದ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ನೇ ಆರೋಪಿ ಟ್ರಾಕ್ಟರ್ ಅನ್ನು ರಸ್ತೆಯ ಉಬ್ಬಿನ ಮೇಲೆ ಅತಿವೇಗವಾಗಿ ಹತ್ತಿಸಿದ್ದರಿಂದ ಟ್ರಾಕ್ಟರ್ ನಲ್ಲಿ ಕುಳಿತುಕೊಂಡಿದ್ದ ಒಬ್ಬ ವ್ಯಕ್ತಿ ಕೆಳಗೆ ಬಿದ್ದು ಹೋಗಿದ್ದು, ಆತನ ಮೇಲೆ ಟ್ರಾಕ್ಟರ್ ಅನ್ನು 1 ನೇ ಆರೋಪಿ ಚಲಿಸಿ, ಟ್ರಾಕ್ಟರ್ ಅನ್ನು ನಿಲ್ಲಿಸದೇ ಹೊರಟು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಕೆಳಗೆ ಬಿದ್ದಿದ್ದ ವ್ಯಕ್ತಿಯ ಹೊಟ್ಟೆ ಮತ್ತು ಮೈಕೈಗಳಿಗೆ ರಕ್ತಗಾಯವಾಗಿ ಕರುಳು ಹೊರಬಂದು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮೃತನನ್ನು ಯಾವುದೇ ಒಂದು ವಾಹನದಲ್ಲಿ ದೇವನಹಳ್ಳಿ ಆಸ್ಪತೆರಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂದವಾಗಿ ದಿ. 15-01-2020 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಮೇರೆಗೆ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-2 ರ ಕಾಲಕ್ಕೆ ಪೋಲಿಸರು ನನ್ನ ಸಮಕ್ಷಮ ಒಂದು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಗಟನೆಯನ್ನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ವೈ ಎನ್ ಎಮ್ ಆರೋಪಿ ಪರ ವಕೀಲರಿಂದ**

ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ಪಂಚರಾಗುವಂತೆ ಪೋಲಿಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ-2 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿಕೊಂಡು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಟ್ರಾಕ್ಟರ್ ಅಪಘಾತ ಆದ ಬಗ್ಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 3444/2020**

ಹೆಸರು : ಅಲುವೇಲಮ್ಮ

ಗಂಡನ ಹೆಸರುಃ ಗಂಗಾದರಪ್ಪ

ವಯಸ್ಸುಃ 55 ವರ್ಷ

ಉದ್ಯೋಗಃ ಹೋಟೆಲ್ ನಲ್ಲಿ ಕೆಲಸ

ವಾಸಃ ಕನ್ನಮಂಗಲ

**PW-1, CW-1**

(ಸಾಕ್ಷಿಗೆ ತೆಲುಗು ಭಾಷೆ ಹೊರತುಪಡಿಸಿ ಕನ್ನಡ ಬಾಷೆ ಮಾತನಾಡಲು, ಓದಲು ಮತ್ತು ಬರೆಯಲು ಬಾರದೇ ಇರುವುದರಿಂದ ನ್ಯಾಯಾಲಯದಲ್ಲಿ ವಕೀಲರಾದ ಶ್ರೀ ಮಂಜುನಾಥ್ ಎನ್ನುವವರು ಹಾಜರಿದ್ದು, ತಮಗೆ ಉತ್ತಮವಾಗಿ ತೆಲುಗು ಮತ್ತು ಕನ್ನಡ ಭಾಷೆ ಮಾತನಾಡಲು ಮತ್ತು ಭಾಷಾಂತರಿಸಲು ಬರುತ್ತಿದೆ ಎಂದು ಹೇಳಿದ ಮೇರೆಗೆ ಸದರಿ ಮಂಜುನಾಥ್ ರವರನ್ನು ಅನುವಾದಕರೆಂದು ನೇಮಿಸಿ, ಸಾಕ್ಷಿಯ ವಿಚಾರಣೆಯನ್ನು ದಾಖಲಿಸಿಕೊಂಡಿರುತ್ತದೆ.)

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 07-10-2023.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಮೃತ ಶ್ರೀನಿವಾಸ್ ನನ್ನ ಮೊದಲನೆ ಮಗ. ಸದರಿಯವರು ಈಗ ಒಂದು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಸದರಿ ವಿಚಾರ ನನಗೆ ಯಾರು ಹೇಳಿದರು ಎಂದು ನನಗೆ ನೆನಪಿಲ್ಲ. ಸದರಿ ಅಪಘಾತ ಯಾವ ರೀತಿ ಮತ್ತು ಯಾವ ಜಾಗದಲ್ಲಿ ನಡೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಈ ಸಂಬಂದವಾಗಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ದೂರಿನಲ್ಲಿರುವ ತನ್ನ ಹೆಬ್ಬಟ್ಟಿನ ಗುರುತನ್ನು ತೋರಿಸಿದ್ದು, ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಇದನ್ನು ಯಾವ ಸಂಬಂದವಾಗಿ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ

ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ. 14-01-2020 ರಂದು ಬೆಳಿಗ್ಗೆ 6.00 ಗಂಟೆಯ ಸಮಯದಲ್ಲಿ 2 ನೇ ಆರೇಪಿಯು ಟ್ರಾಕ್ಟರ್ ನಲ್ಲಿ ಜಲ್ಲಿ ತುಂಬಿಕೊಂಡು ಬರುವ ಕೆಲಸಕ್ಕೆ ನನ್ನ ಮಗ ಮೃತ ಶ್ರೀನಿವಾಸನು ಹೋಗುವುದಾಗಿ ನನ್ನ ಮಗ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಅದೇ ದಿನ ಮದ್ಯಾಹ್ನ 3.30 ಗಂಟೆಯ ಸಮಯದಲ್ಲಿ ನಾನು ಕೃಷ್ಣಪೂಜಾರಿರವರ ಹೋಟೆಲ್ ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾಗ ಯಾರೋ ನನ್ನ ಮಗನ ಸ್ನೇಹಿತ ಬಂದು ಈ ದಿನ ಮದ್ಯಾಹ್ನ 1.30 ಗಂಟೆಯ ಸಮಯದಲ್ಲಿ ನಾಗಮಂಗಲ, ಚೌಡನಹಳ್ಳಿ ರಸ್ತೆ ನಾಗಮಂಗಲ ಗ್ರಾಮದ ರಾಮಣ್ಣ ನವರ ಮನೆಯ ನೇರದ ರಸ್ತೆಯಲ್ಲಿ 1 ನೇ ಆರೋಪಿಯು 2 ನೇ ಅರೋಪಿಯವರ ಟ್ರಾಕ್ಟರ್ ಮತ್ತು ಟ್ರಾಲಿಯಲ್ಲಿ ಜಲ್ಲಿ ಪುಡಿಯನ್ನು ತುಂಬಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ರಸ್ತೆಯ ಉಬ್ಬಿನ ಮೇಲೆ ಟ್ರಾಕ್ಟರ್ ಅನ್ನು ಚಲಾಯಿಸಿದಾಗ ಟ್ರಾಕ್ಟರ್ ನಲ್ಲಿ ಕುಳಿತಿದ್ದ ನನ್ನ ಮಗ ಮೃತ ಶ್ರೀನಿವಾಸನು ನಿಯಂತ್ರಣ ತಪ್ಪಿ ಟ್ರಾಕ್ಟರ್ ನಿಂದ ಕೆಳಗೆ ಬಿದ್ದಾಗ 1 ನೇ ಆರೋಪಿ ಟ್ರಾಕ್ಟರ್ ಅನುನ ನನ್ನ ಮಗನ ಮೇಲೆ ಹತ್ತಿಸಿಕೊಂಡು ಹೋಗಿ ಸ್ದಳದಲ್ಲಿ ನಿಲ್ಲಿಸದೇ ಹೊರಟು ಹೋಗಿರುತ್ತಾರೆ ಎನ್ನುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಇದರಿಂದ ನನ್ನ ಮಗ ಶ್ರೀನಿಸವಾಸ ರವರ ಹೊಟ್ಟೆ ಮತ್ತು ಮೈಕೈಗಳಿಗೆ ತೀವ್ರ ರಕ್ತಗಾಯಗಳಾಗಿ ಸ್ದಳದಲ್ಲಿ ಮೃತಪಟ್ಟಿರುವುದಾಗಿ ತಿಳಿಸಿ, ನನ್ನ ಮಗನನ್ನು ದೇವನಹಳ್ಳಿ ಆಕಾಶ್ ಆಸ್ಪತ್ರೆ ಶವಗಾರದಲ್ಲಿ ಇಟ್ಟಿರುವುದಾಗಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂದವಾಗಿ ನಾನು ನಿಪಿ-1 ರಲ್ಲಿ ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ

ಸರಿಯಲ್ಲ. ಪ್ರಕರಣವನ್ನು ರಾಜೀ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ವೈ ಎನ್ ಎಮ್ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.